

## ಧಣಿ ಹಾಗೂ ಬಾಟ್ಲ ಮುನಿ!

ಸಾಲು ಸಾಲು ಗೆಲುವುಗಳ ಮೂಲಕ ಯಶಸ್ಸಿನ ಸಿಹಿ ಚಪ್ಪರಿಸುತ್ತಿರುವ ಶರಣ್ ಅವರ 'ರಾಜ ರಾಜೇಂದ್ರ' ಫೆ. 6ರಂದು ತೆರೆಕಾಣುತ್ತಿದೆ. ತಮ್ಮ ಮಿತಿಯಲ್ಲಿಯೇ ಪ್ರಯೋಗಶೀಲ ಸಿನಿಮಾಗಳನ್ನು ನೀಡುತ್ತಿರುವ ಶರಣ್‌ರ ಪಾಲಿಗೆ, 'ರಾಜ ರಾಜೇಂದ್ರ' ಕೂಡ ಹೊಸಬಗೆಯ ಸಿನಿಮಾ.

ನಾಯಕನ ಪಾತ್ರಕ್ಕೆ ಎರಡು ಆಯಾಮಗಳಿರುವುದು ಚಿತ್ರದ ವಿಶೇಷ. ಸ್ವಾತಂತ್ರ್ಯಪೂರ್ವದ ಕಾಲ ಮತ್ತು ಈ ಹೊತ್ತಿನ ಎರಡು ಕಾಲಘಟ್ಟಗಳಲ್ಲಿ ನಡೆಯುವ ಕಥೆ ಚಿತ್ರದ್ದು. ಈ ಎರಡೂ ಕಥನಗಳ ದೃಶ್ಯಗಳನ್ನು ಕಲಸುಮೇಲೋಗರದ ರೀತಿ ನಿರೂಪಿಸುವ ಮೂಲಕ ಪ್ರೇಕ್ಷಕರನ್ನು ರಂಜಿಸಲು ಚಿತ್ರತಂಡ ಪ್ರಯತ್ನಿಸಿದೆಯಂತೆ. ರಾಜನಾಗಿ ನಟಿಸಿರುವುದು ಒಂದು ಪಾತ್ರವಾದರೆ, ಬಾಟ್ಲ ಮುನಿ ಎನ್ನುವ ಸಮಕಾಲೀನ ಜಗತ್ತಿನ ಮತ್ತೊಂದು ಪಾತ್ರವನ್ನೂ ಶರಣ್ ಪೋಷಿಸಿದ್ದಾರೆ.

'ಈ ಪಾತ್ರ ಯುಗಳ ಅಭಿಮಾನಿಗಳಿಗೆ ಕಿಕ್ ನೀಡುವುದು ಮಾತ್ರವಲ್ಲ, ಸ್ವತಃ ತನಗೇ ಖುಷಿ ನೀಡಿದೆ' ಎನ್ನುತ್ತಾರೆ ಶರಣ್.

ಅರ್ಜುನ್ ಜನ್ಯ ಸಂಗೀತ ನಿರ್ದೇಶನದ ಹಾಡುಗಳು ಚಿತ್ರದ ಹೈಲೈಟ್‌ಗಳಲ್ಲಿ ಸೇರಿವೆ. ಲಾವಣಿ ಶೈಲಿಯ ಗೀತೆಯೊಂದನ್ನು ಸ್ವತಃ ಶರಣ್‌ರಿಂದ ಸಂಗೀತ ನಿರ್ದೇಶಕರು ಹಾಡಿಸಿದ್ದಾರೆ. ಈ ಮೂಲಕ ಶರಣ್ 'ಹಿನ್ನೆಲೆ ಗಾಯಕ'ನಾಗಿ ಮೊದಲ ಬಾರಿಗೆ ಗುರುತಿಸಿಕೊಂಡಂತಾಗಿದೆ. ಪಿ. ಕುಮಾರ್ ನಿರ್ದೇಶನದ 'ರಾಜ ರಾಜೇಂದ್ರ' ಚಿತ್ರದಲ್ಲಿ ಶರಣ್‌ಗೆ ಜೋಡಿಯಾಗಿ ವಿಮಲಾ ರಾಮನ್ ಮತ್ತು ಇಷಿಕಾ ದತ್ತಾ ನಟಿಸಿದ್ದಾರೆ. ಸಾಧು ಕೋಕಿಲ ಮತ್ತು ರಾಮಕೃಷ್ಣ ತಾರಾಗಣದಲ್ಲಿನ ಪ್ರಮುಖರು.



## ಇದು ಬರಿ 'ಕಹಿ' ಅಲ್ಲ...

ಚಿತ್ರೀಕರಣ ಸಮಯದಲ್ಲಿನ ಸಿಹಿಕಹಿ ಅನುಭವಗಳನ್ನು ಹಂಚಿಕೊಳ್ಳಲು ಸುದ್ದಿಗಾರರ ಎದುರು ಕುಳಿತ 'ಕಹಿ' ಚಿತ್ರತಂಡ ಒಕ್ಕೊರಲಿನಿಂದ ಹೇಳಿದ್ದು– 'ನಮ್ಮ ಸಿನಿಮಾದ ಕಥೆ ರುಚಿಗೆ ಸಂಬಂಧಿಸಿದ್ದಲ್ಲ, ಬದುಕಿಗೆ ಸಂಬಂಧಿಸಿದ್ದು'.

'ಕಹಿ' ಅರವಿಂದ ಶಾಸ್ತ್ರಿ ನಿರ್ದೇಶನದ ಚೊಚ್ಚಿಲ ಸಿನಿಮಾ. 'ಕಹಿ ಎನ್ನುವುದು ನಿರಾಶೆಯ ಸಂಕೇತವಲ್ಲ. ಅದೊಂದು ರುಚಿ ಹಾಗೂ ಭಾವನೆ' ಎಂದು ಸ್ಪಷ್ಟವಾಗಿ ಹೇಳುವ ನಿರ್ದೇಶಕರು, 'ಕಹಿ'ಯಲ್ಲಿ ಬದುಕಿನ ತತ್ವವನ್ನೇ ಅಡಕಗೊಳಿಸುವ ಪ್ರಯತ್ನ ನಡೆಸಿದ್ದಾರಂತೆ. ಅಂದಹಾಗೆ, ಇಲ್ಲಿನ ಬದುಕು ನಗರ ಜೀವನದ ಕುರಿತಾದುದು. 'ಬದುಕಿನ ಕುರಿತಾದ ಚಿತ್ರವಾದರೂ, ಉಪದೇಶ ಹೇಳುವುದು ನಮ್ಮ ಉದ್ದೇಶವಲ್ಲ. ನೋಡುಗರನ್ನು ರಂಜಿಸುತ್ತ, ಯೋಚನೆಗೆ ಹಚ್ಚುವ ಪ್ರಯತ್ನ ನಮ್ಮದು' ಎನ್ನುತ್ತಾರೆ ಅರವಿಂದ ಶಾಸ್ತ್ರಿ. ಚಿತ್ರದಲ್ಲಿ ನಾಲ್ಕು ಪ್ರಮುಖ ಪಾತ್ರಗಳಿವೆ. ಆದರೂ, 'ಕಥೆಯೇ ಚಿತ್ರದ ನಾಯಕ' ಎನ್ನುವ ವಿಶ್ಲೇಷಣೆ ಅವರದು.

ಮಾತಂಗಿ ಹಾಗೂ ಖುಷಿ ಚಿತ್ರದ ನಾಯಕಿಯರು. ಮಾತಂಗಿ ಮೂಲತಃ ಭರತನಾಟ್ಯ ಕಲಾವಿದೆ. ಈ ಮೊದಲು ಕೂಡ ಸಿನಿಮಾ ಅವಕಾಶಗಳೂ ಬಂದರೂ ಒಲ್ಲೆ ಎಂದಿದ್ದ ಈ ತರುಣಿ, 'ಕಹಿ' ಬಳಗದ ಸ್ನೇಹದ ಕರೆಯನ್ನು ಒಪ್ಪಿಕೊಂಡಿದ್ದಾರೆ. ಚಿತ್ರದ ನಾಯಕರಾದ ಸೂರಜ್ ಕಿರುತೆರೆಯ ಅನುಭವ ಹೊಂದಿದ್ದರೆ, ಮತ್ತೊಬ್ಬ ನಾಯಕ ಹರಿ ಶರ್ವ ರಂಗಭೂಮಿಯ ಹಿನ್ನೆಲೆ ಹೊಂದಿದ್ದಾರೆ.

ಮಿಥುನ್ ಮುಕುಂದನ್ (ಸಂಗೀತ) ಹಾಗೂ ಪ್ರಶಾಂತ್ (ಛಾಯಾಗ್ರಹಣ) 'ಕಹಿ' ಬಳಗದ ಪ್ರಮುಖ ತಂತ್ರಜ್ಞರು. ಈ ಸಿನಿಮಾದ ಮತ್ತೊಂದು ವಿಶೇಷವೆಂದರೆ, ಚಿತ್ರತಂಡದ ಬಹುತೇಕರು ಐಟಿ ಕ್ಷೇತ್ರಕ್ಕೆ ಸಂಬಂಧಿಸಿದವರು ಹಾಗೂ ಸ್ನೇಹಿತರು!

■ ರಘು